## ಮಹಿಳೆಯರ ಆಪ್ತಕಥನ

ಸ್ಟಾರ್ ಸುವರ್ಣದಲ್ಲಿ 'ಸುವರ್ಣ ಸೂಪರ್ ಸ್ಟಾರ್' ಎರಡು ಗಂಟೆಗಳ ಕಾಲ ಬರುತ್ತದೆ. ಇದು ಹೆಣ್ಣುಮಕ್ಕಳಿಗಾಗಿ ರೂಪಿಸಿದ ಒಳ್ಳೆಯ ಕಾರ್ಯಕ್ರಮ. ಅವರ ಕಷ್ಟ ಸುಖಗಳನ್ನು ಈ ವೇದಿಕೆಯಲ್ಲಿ ಹಂಚಿಕೊಳ್ಳಬಹುದು. ವೀಕ್ಷಕರಿಗೂ ಒಂದಲ್ಲ ಒಂದು ರೀತಿಯಿಂದ ಸಹಾಯವಾಗುವ 'ಅನುಭವ ಕಥನ' ಇಲ್ಲಿ ಅನಾವರಣಗೊಳ್ಳುತ್ತದೆ. ಶಾಲಿನಿ ಅವರ ಹಾಸ್ಯಭರಿತ ನಿರೂಪಣೆ ಕೂಡ ಸೊಗಸಾಗಿ ಇರುತ್ತದೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

## ಕ್ರೌರ್ಯದ ಅತಿರೇಕಕ್ಕೆ 'ಲಕ್ಷಣ'

ಕಲರ್ಸ್ ಕನ್ನಡದ 'ಲಕ್ಷಣ' ಧಾರಾವಾಹಿಯಲ್ಲಿ ಹಿಂಸೆ ಮತ್ತು ಕ್ರೌರ್ಯ ಮಿತಿಮೀರಿದೆ. ಇದರಲ್ಲಿ ಎಲ್ಲರೂ ವಿಕೃತಿ ಮೆರೆಯುವ ವಿಲನ್‌ಗಳೇ ಆಗಿದ್ದಾರೆ. ಒಬ್ಬರ ಮೇಲೆ ಒಬ್ಬರು ಕತ್ತಿ ಮಸೆಯುವುದೇ ಪ್ರಧಾನ ಅಂಶ. ಮನಮಿಡಿಯುವ ಮುದನೀಡುವ ಒಂದು ದೃಶ್ಯವೂ ಇಲ್ಲ.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಸಿ.ಡಿ. ಯಾಕೆ? ಪುಸ್ತಕ ಓಕೆ!

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮ ಅನೇಕ ವಿಷಯಗಳ ಪರಿಚಯದ ಜೊತೆ ಮಾಹಿತಿಯನ್ನೂ ನೀಡುತ್ತದೆ. ಒಗಟುಗಳ ಗೂಢಾರ್ಥ, ಅಕ್ಷರ ಜೋಡಣೆ, ಲೆಕ್ಕ, ಚಟ್ ಪಟ್ ಚಿನಕುರುಳಿ ಸುತ್ತುಗಳ ಸ್ವರೂಪ ಹಾಗೂ ಡಾ. ನಾ. ಸೋಮೇಶ್ವರ ಅವರು ನೀಡುವ ವಿವರಣೆ ತುಂಬ ಉಪಯುಕ್ತ. ನಿರಂತರ ಕಾರ್ಯಕ್ರಮ ನಡೆಸುತ್ತಿರುವ ಅವರಿಗೆ ಅಭಿನಂದನೆಗಳು. ಒಂದು ಸಲಹೆ ಏನೆಂದರೆ, ಸ್ಪರ್ಧಿಗಳು 100 ಅಂಕ ಪಡೆದರೆ, ಒಂದು ಸಿ.ಡಿ. (ಅಡಕಮುದ್ರಿಕೆ) ನೀಡುವ ಸಂಪ್ರದಾಯವಿದೆ. ಈಗ ಯಾರು ತಾನೆ ಅಡಕ ಮುದ್ರಿಕೆ ಉಪಯೋಗಿಸುತ್ತಾರೆ? ಅದರ ಬದಲು ಅದೇ ಬೆಲೆಯ ಉತ್ತಮ ಪುಸ್ತಕ ನೀಡಿದರೆ ಉಪಯೋಗವಾದೀತು.

—ಶ್ರೀಧರ ರಾಯಸಂ, ಬೆಂಗಳೂರು

## ಎಲ್ಲೆ ಮೀರಿದ ದ್ವೇಷ-ಗೋಳು

ಹೆಣ್ಣಿನ ಅಹಂಕಾರ, ದ್ವೇಷ, ಕುತಂತ್ರ, ಪ್ರತಿತಂತ್ರಗಳ ಮತ್ತೊಂದು ರೂಪವೇ ಕಲರ್ಸ್ ಕನ್ನಡದ 'ರಾಮಾಚಾರಿ' ಅಂದರೆ ತಪ್ಪಾಗಲಾರದು. ಇದರಲ್ಲಿ ನಾಯಕಿ ಮತ್ತು ನಾಯಕಿಯ ಅಮ್ಮನ ಪಾತ್ರಗಳ ಪೋಷಣೆ ಅತಿರೇಕದ ಪರಮಾವಧಿ ತಲುಪಿದೆ. ಊಹಿಸಲು ಅಸಾಧ್ಯವಾದ ತಂತ್ರಗಾರಿಕೆ ನಡುವೆ ಸಿಲುಕಿ ನಾಯಕನ ಕುಟುಂಬ ನರಳಾಡುತ್ತದೆ.

ವಾರದ ಪತ್ರ

## ಎಚ್ಚರಿಕೆ: ಐಪಿಸಿ ಉಲ್ಲಂಘನೆ...

ಟೀವಿ ಧಾರಾವಾಹಿಗಳಲ್ಲಿ 'ಶಾಸನ ವಿಧಿಸಿದ ಎಚ್ಚರಿಕೆ: ಹೆಲ್ಮೆಟ್ ಧರಿಸದೆ ವಾಹನ ಸವಾರಿ ಮಾಡುವುದು / ಸೀಟ್ ಬೆಲ್ಟ್ ಧರಿಸದೆ ವಾಹನ ಚಲಾಯಿಸುವುದು ಕಾನೂನು ಪ್ರಕಾರ ಅಪರಾಧ' ಎಂಬ ಬರಹ ತೆರೆಯ ಮೇಲೆ ಮೂಡುತ್ತದೆ. ಮದ್ಯಪಾನ/ ಧೂಮಪಾನ ಮಾಡುವ ದೃಶ್ಯ ಪ್ರಸಾರವಾದಾಗ 'ಮದ್ಯಪಾನ/ ಧೂಮಪಾನದಿಂದ ಸಾವು ಸಂಭವಿಸಬಹುದು' ಎಂಬ ಬರಹಗಳೂ ತೆರೆಯ ಮೇಲೆ ಮೂಡಿ ವೀಕ್ಷಕರನ್ನು ಎಚ್ಚರಿಸುತ್ತವೆ.

ಇಂಥ ನಿಯಮಗಳನ್ನು ಉಲ್ಲಂಘಿಸುವುದು ಅಪರಾಧ ಎಂಬ ಅರಿವು ನಿರ್ದೇಶಕರಿಗಿದೆ. ವಿಪರ್ಯಾಸವೆಂದರೆ, ಈ ಧಾರಾವಾಹಿಗಳಲ್ಲಿ ಪ್ರಸಾರವಾಗುವ ಪ್ರತಿಯೊಂದು ದೃಶ್ಯಗಳೂ ಭಾರತ ದಂಡ ಸಂಹಿತೆ ಅನ್ವಯ ಶಿಕ್ಷಾರ್ಹ ಅಪರಾಧಗಳೇ! ಧಾರಾವಾಹಿಯಲ್ಲಿ ಬರುವ ಕೊಲೆ, ಅಪಹರಣ, ವಂಚನೆ ಮುಂತಾದ ಗಂಭೀರ ಅಪರಾಧಗಳ ಬಗ್ಗೆ ಕಾನೂನು ಅರಿವು ಹಾಗೂ ಪ್ರಜ್ಞೆಯನ್ನು ಏಕೆ ತೋರಿಸುತ್ತಿಲ್ಲ? ಇಂತಹ ದೃಶ್ಯ ಬಂದಾಗ 'ಐ.ಪಿ.ಸಿ. ಪ್ರಕಾರ ಶಿಕ್ಷಾರ್ಹ ಅಪರಾಧ' ಎಂಬ ಬರಹವೂ ಮೂಡಿ ಬರಬೇಕು.

—ಪಿ.ಜೆ. ರಾಘವೇಂದ್ರ, ಮೈಸೂರು

ಈ ನಾಯಕನೋ ತನ್ನ ಅತ್ತಿಗೆಯ ಶವವನ್ನ ಹಾಗೇ ಬಿಟ್ಟು, ಸಾವಿಗೆ ಸೇಡು ತೀರಿಸಿಕೊಳ್ಳಲು ವೀರಾವೇಶದಿಂದ ಹೊರಡುತ್ತಾನೆ. ಕೊನೆಗೆ ಅಳು ಮೋರೆ ಹೊತ್ತು ಮರಳುವ ದೃಶ್ಯವಂತೂ ಹಾಸ್ಯಾಸ್ಪದ. ಅಂತೂ ಒಂದು ಸಂಚಿಕೆ ಮುಗೀತು ಅಂದ್ರೇ ಮತ್ತೆರಡು ಮೂರು ದಿನ ಅದೇ ಗೋಳು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಕುಡುಕರ ಹಾಸ್ಯಕ್ಕೆ ಮಿತಿ ಬೇಕು

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ಕಾರ್ಯಕ್ರಮದಲ್ಲಿ ಕುಡಿದು ಬಂದ ಗಂಡನನ್ನು ಹೆಂಡತಿ ಫುಟ್ಬಾಲ್ ರೀತಿ ಒದೆಯುತ್ತಾಳೆ. ಬಾಯಿಗೆ ಬಂದಂತೆ ಕೆಟ್ಟದಾಗಿ ಬೈಯುತ್ತಾಳೆ. ಪೊರಕೆ ಸೇವೆಯನ್ನೂ ಮಾಡುತ್ತಾಳೆ. ಇದೆಲ್ಲವೂ ಹಾಸ್ಯದ ಹೆಸರಿನಲ್ಲಿ ನಡೆಯುವ ದೃಶ್ಯಾವಳಿ. ವೇದಿಕೆಯಲ್ಲಿ ಕುಡಿದು ತೂರಾಡುವ ದೃಶ್ಯಗಳು ವೀಕ್ಷಕರಿಗೆ ಮುಜುಗರ ತರಿಸುತ್ತವೆ. ಸ್ವಲ್ಪ ಬದಲಾವಣೆ ಅಗತ್ಯ ಅನ್ನಿಸುತ್ತೆ.

—ಭಾರತೀ ಗಂಗಾಧರ್, ಬೆಂಗಳೂರು

## ಮಾಯಾಮೃಗಕ್ಕೆ ಬೇಕು ಮಿಂಚಿನ ವೇಗ

ಸಿರಿ ಕನ್ನಡದಲ್ಲಿ 'ಮತ್ತೆ ಮಾಯಾಮೃಗ' ಪ್ರಸಾರವಾಗುತ್ತಿದೆ. ಪ್ರಾರಂಭದಂತೆ ಈಗಿಲ್ಲ. ಅದು ತನ್ನ ವೇಗವನ್ನು ಕಡಿಮೆ ಮಾಡಿಕೊಂಡಿದೆ. ಧಾರಾವಾಹಿಗೆ ಮಿಂಚಿನ ಓಟವಿರಬೇಕು. ವೀಕ್ಷಕರಲ್ಲಿ ಸೆಳೆತ ಉಂಟಾಗಬೇಕು. ಇಲ್ಲಿ ಬರೀ ಎಳೆತ. ಶಾಸ್ತ್ರಿಗಳ ವಿಚಾರದಲ್ಲಿ ಅಷ್ಟೊಂದು ಎಳೆತ ಬೇಕೆ? ತಂದೆ–ಮಕ್ಕಳ ಭಿನ್ನಾಭಿಪ್ರಾಯ ತೋರಿಸುವ ರೀತಿ ಕನ್ವಿನ್ಸಿಂಗ್ ಅನ್ನಿಸಲಿಲ್ಲ. ತಾಯಿ–ಮಕ್ಕಳ ಸಂಬಂಧ ತೋರಿಸುವ ರೀತಿ ಅಸಹಜ ಎನ್ನಿಸಿತು. ಟಿ.ಎನ್. ಸೀತಾರಾಮ್ ಅವರ ಹಿಂದಿನ ಧಾರಾವಾಹಿಗಳಿಗೆ ಹೋಲಿಸಿದರೆ ನಿರಾಸೆ ಮೂಡಿಸುತ್ತಿದೆ.




—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಧಾರಾವಾಹಿ ಚೆನ್ನಾಗಿದೆ. ಮೊದಲಿನ ಕಥಾಹಂದರಕ್ಕೆ ಇನ್ನೂ ಹೊಂದಿಕೆ ಆಗಬೇಕಿದೆ. ಶಾಸ್ತ್ರಿಗಳು ಕಾಣಿಸದೆ ಹೋದಾಗ ಗುಡಿಯ ಕಾರ್ಯದರ್ಶಿ, 'ಶಾಸ್ತ್ರಿಗಳು ನಿಮ್ಮ ಹೆಣ್ಣುಮಕ್ಕಳ ಮನೆಗೆ ಹೋಗಿರಬಹುದಾ?' ಅಂತ ಕೇಳುತ್ತಾರೆ. ಆಗ ಶಾಸ್ತ್ರಿಗಳ ಮಡದಿ, 'ಅವರ ಮನೆ, ವಿಳಾಸ ನಮಗೆ ಗೊತ್ತಿಲ್ಲ. ಅವರೇ ಆಗಾಗ ಬಂದು ಹೋಗುತ್ತಾರೆ. ನಮ್ಮ ಮನೆಯಲ್ಲಿ ಫೋನ್ ಇಲ್ಲ' ಅಂತ ಹೇಳುತ್ತಾರೆ. ಈ ಮಾತನ್ನು ಒಪ್ಪಿಕೊಳ್ಳುವುದು ಕಷ್ಟ.

—ಮೇಘನಾ

ಇಪ್ಪತ್ತು ವರ್ಷಗಳ ನಂತರ ಹಳೆಯ ಪಾತ್ರಗಳನ್ನು ಮುಂದುವರಿಸಿ, ಇಂದು ಅವರ ಬದುಕಿನ ಏಳು ಬೀಳುಗಳನ್ನು 'ಮತ್ತೆ ಮಾಯಾಮೃಗ'ದಲ್ಲಿ ಚಿತ್ರಿಸುತ್ತಿದ್ದಾರೆ. ಹಿಂದಿನ ಸ್ವಾರಸ್ಯವಾಗಲೀ, ಪಾತ್ರ ವರ್ಗಗಳ ನೈಜತೆಯಾಗಲೀ ಉಳಿದಂತೆ ಕಾಣಿಸುತ್ತಿಲ್ಲ.

—ಗೀತಾ ನೆಲ್ಲೀಕಾಯಿ

'ಮಾಯಾಮೃಗ'ದಲ್ಲಿ ಹಿಂದಿನ ಮಿಂಚು, ಲಯ ಕಾಣಿಸುತ್ತಿಲ್ಲ. ಸಂಭಾಷಣೆ, ಕಥಾಹಂದರ, ನಿರೂಪಣೆ, ಅಭಿನಯದಲ್ಲಿ ಸೀತಾರಾಮ್ ಅವರ ಕೈಚಳಕ ಎದ್ದು ಕಂಡರೂ ಅವರ ಧಾರಾವಾಹಿಯಲ್ಲಿ ಕಾಣುವ ಲವಲವಿಕೆ, ಕುತೂಹಲ ಇದರಲ್ಲಿ ಮಿಸ್ಸಾದಂತೆ ಅನಿಸುತ್ತದೆ.

—ರಮಾನಂದ ಶರ್ಮಾ, ನವದೆಹಲಿ